**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಕೇಸ್ ನಂ.71ಃ2019**

| | |
|---|---|
| ಫಿರ್ಯಾದುದಾರರು | ನಗರ ಪೋಲೀಸ್ ಠಾಣೆ, ಚಿಕ್ಕಮಗಳೂರು. |

ವಿರುದ್ಧ

| | |
|---|---|
| ಆರೋಪಿತರು | ತಮೀಮ್ ಮತ್ತು ಇನ್ನೊಬ್ಬ. |

**ದೋಷಾರೋಪಣೆ**

ಚಿಕ್ಕಮಗಳೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ವಿಶೇಷ ನ್ಯಾಯಾಧೀಶರಾದ ಶುಭ ಗೌಡರ್, ಬಿ.ಎ., ಎಲ್.ಎಲ್.ಬಿ., ಆದ ನಾನು

ಎ 5. ತಮೀಮ್ ಬಿನ್ ಕರಾಟೆ ಮೊಹಮ್ಮದ್, ವಯಸ್ಸು 32 ವರ್ಷ, ಟಾಟಾ ಏಸ್ ವಾಹನ ಚಾಲಕ, ಸ್ವಂತ ವಿಳಾಸಃ ಶಾದುಲಿ ಮಸೀದಿ ಮುಂಭಾಗ, ಉಪ್ಪಳ್ಳಿ, ಚಿಕ್ಕಮಗಳೂರು, ಹಾಲಿ ವಾಸಃ ನಿವೃತ್ತ ಪಿ.ಎಸ್.ಐ. ಬೋಜೇಗೌಡ ರವರ ಮನೆಯ ಮುಂಭಾಗ, ಭಾನುಪ್ರಕಾಶ್ ಹೈಸ್ಕೂಲ್ ಹತ್ತಿರ, ಉಪ್ಪಳ್ಳಿ, ಚಿಕ್ಕಮಗಳೂರು.

**( 11 ನೇ ಆರೋಪಿ ಮೊಹಮ್ಮದ್ ಆಸೀಫ್ ಯಾನೆ ಅಸೀಫ್ ವಿರುದ್ಧ ಸ್ಪೆಷಲ್ ಕೇಸ್ ನಂಃ19ಃ22 ರಲ್ಲಿ ಪ್ರತ್ಯೇಕ ಕೇಸು ದಾಖಲಿಸಿದೆ)**

ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕಃ10-2-2018 ಕ್ಕಿಂತಲೂ ಮೊದಲು, ನೀನು 5 ನೇ ಆರೋಪಿಯು, 6 ರಿಂದ 12 ನೇ ಆರೋಪಿಗಳೊಂದಿಗೆ ಸೇರಿಕೊಂಡು ಚಿಕ್ಕಮಗಳೂರಿನ ವಿವಿಧ ಕಡೆಗಳಲ್ಲಿ ಗಾಂಜಾ ಸೊಪ್ಪನ್ನು ಮಾರಾಟ ಮಾಡುವ ಉದ್ದೇಶವನ್ನು ಹೊಂದಿದ್ದು, ಆ

ಪ್ರಕಾರ ಗಾಂಜಾ ಸೊಪ್ಪನ್ನು ತರಲು 1 ನೇ ಆರೋಪಿಗೆ ಹಣವನ್ನು ನೀಡಿ, 2 ನೇ ಆರೋಪಿಗೆ ಸೇರಿದ ಮಾರುತಿ ಒಮಿನಿ ಕಾರ್ ನಂಃಕೆಎ-20ಃಎಂ.8592 ರಲ್ಲಿ 1 ರಿಂದ 3 ನೇ ಆರೋಪಿತರನ್ನು ಗಾಂಜಾಸೊಪ್ಪನ್ನು ತರಲು ಕಳುಹಿಸಿಕೊಟ್ಟಿದ್ದು, ಆ ಪ್ರಕಾರ ದಿನಾಂಕಃ10-2-2018 ರಂದು ಸಂಜೆ 5-15 ಗಂಟೆ ಸಮಯದಲ್ಲಿ 1 ರಿಂದ 3 ನೇ ಆರೋಪಿಗಳು ಮಾರುತಿ ಒಮಿನಿ ಕಾರ್ ನಂಃಕೆಎ-20ಃಎಂ.8592 ರಲ್ಲಿ ಒಂದು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ 3 ಕೆ.ಜಿ. ತೂಕದ ಹಾಗೂ ಇನ್ನೊಂದು ಕೈ ಬ್ಯಾಗನಲ್ಲಿ ಸುಮಾರು 1 ಕೆ.ಜಿ. 150 ಗ್ರಾಂ ತೂಕದ ಒಣಗಿಸಿದ ಕಾಂಡ, ಹೂವು, ಬೀಜ ಮಿಶ್ರಿತ ಹಾಗೂ ಎಲೆಗಳಿಂದ ಕೂಡಿದ ಗಾಂಜಾ ಸೊಪ್ಪನ್ನು ತುಂಬಿಕೊಂಡು ಚಿಕ್ಕಮಗಳೂರು ನಗರದ ಪವಿತ್ರವನದ ಮುಂಭಾಗ ಹಾದು ಹೋಗಿರುವ ಕಡೂರು - ಮಂಗಳೂರು ರಸ್ತೆಯಲ್ಲಿ ಚಿಕ್ಕಮಗಳೂರು ಕಡೆಗೆ ಸಾಗಾಣಿಕೆ ಮಾಡುತ್ತಿದ್ದಾಗ, ಸಾಕ್ಷಿ-1 ರವರು ಸಾಕ್ಷಿ-4 ರಿಂದ 10 ರವರೊಂದಿಗೆ ದಾಳಿ ನಡೆಸಿ ಗಾಂಜಾವನ್ನು ವಶಪಡಿಸಿಕೊಂಡಿದ್ದು, ನೀನು, 6 ರಿಂದ 12 ನೇ ಆರೋಪಿಗಳೊಂದಿಗೆ ಎನ್.ಡಿ.ಪಿ.ಎಸ್. ಕಲಂ 20(ಬಿ)(ii) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀಯಾ ಎಂದು ನಿನ್ನ ಮೇಲೆ ಅಪಾದನೆ ಮಾಡಿದ್ದೇನೆ.

ಮೇಲಿನ ಆರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

ದಿನಾಂಕಃ 17 ನೇ ಫೆಬ್ರವರಿ 2022.

ಸಹಿಃ-

( ಶುಭ ಗೌಡರ್),
ವಿಶೇಷ ನ್ಯಾಯಾಧೀಶರು,
ಚಿಕ್ಕಮಗಳೂರು.

ಕೆಟಿಪಿ